## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/2016

ಸಿ.ಡಬ್ಲ್ಯು 122
ಪಿ.ಡಬ್ಲ್ಯು 64

| | | |
|---|---|---|
| ಸಾಕ್ಷಿದಾರರ ಹೆಸರು | – | ಕೆ ರಾಮಾರಾವ್ |
| ತಂದೆಯ ಹೆಸರು | – | ಕೆ ನಾರಾಯಣರಾವ್ |
| ವಯಸ್ಸು | – | 62 ವರ್ಷ |
| ಉದ್ಯೋಗ | – | ನಿವೃತ್ತ ಡಿ ವಾಯ್ ಎಸ್ ಪಿ |
| ವಾಸ್ತವ್ಯ | – | ಸಂಡೂರು ಬಳ್ಳಾರಿ |

(ಇಂದು ದಿನಾಂಕ 13-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಹಿರಿಯ ಸ.ಸ.ಅ. ರವರಿಂದ**

ನಾನು ಜೂನ್ 2001 ರಿಂದ ಅಗಷ್ಟ 2002 ರವರೆಗೆ ಕಾರವಾರ ನಗರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯನಿರ್ವಹಿಸಿದ್ದೇನೆ .

ದಿನಾಂಕಃ 22-05-2002 ರಂದು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪ್ರಥಮ ವರ್ತಮಾನ ಹೇಳಿಕೆಯನ್ನು ನೀಡಿದ್ದು, ಅದನ್ನು ಸ್ವೀಕರಿಸಿ ಠಾಣೆಯ ಗುನ್ನಾ ನಂ. 142/2003 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿದ್ದೇನೆ. ಪ್ರಕಥಮ ವರ್ತಮಾನ ಹೇಳಿಕೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-68 ಎಂದು, ಸಾಕ್ಷಿಯ ಸಹಿಯನ್ನು ನಿಪಿ-68(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿತರು ನವತಾರಾ ಹೊಟೆಲ್ ಲಾಡ್ಜನಲ್ಲಿ ರೂಮ್ ನಂ. 218 ರಲ್ಲಿ ಇರುವುದಾಗಿ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರೊಂದಿಗೆ ಹೊಟೆಲ್ ನಲ್ಲಿ ಹೋಗಿ ರಾತ್ರಿ 10 ಗಂಟೆಗೆ ಹೋಗಿ ರೂಮ್ ಬಾಯ್ ಮತ್ತು ಮ್ಯಾನೇಜರ ಇವರ ಸಹಾಯದಿಂದ

ಅವರನ್ನು ವಶಕ್ಕೆ ಪಡೆದುಕೊಂಡಿದ್ದೇನೆ. ಅವರ ಹೆಸರುಗಳನ್ನು ವಿಚಾರಿಸಲಾಗಿ ವಾಸೀಮ್ ಜಾಹಿರುದ್ದೀನ್ , ಫರೀದ್ ಮಹಮ್ಮದ್, ಸೈಯದ್ ಜಾವೇದ್ , ಇಸಾಕ್ ಅಹಮ್ಮದ್ ಹಾಗೂ ಇಪ್ತಿಕಾರ್ ಅಹಮ್ಮದ್ ಇವರನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಕೂಡಲೇ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅವರ ಬಳಿ ಇದ್ದ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ ಎಸ್ ಎಸ್ ಎಲ್ ಸಿ , ಪಿಯುಸಿ, ಬಿ ಎ –I, II, III ಸಂಬಂಧಪಟ್ಟಂತೆ ಬೇರೆ ಬೇರೆ ವ್ಯಕ್ತಿಗಳ ಬೇರೆ ಬೇರೆ ವರ್ಗಾವಣೆ ಪ್ರಮಾಣ ಪತ್ರಗಳನ್ನು , ಅಂಕಪಟ್ಟಿಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. (ಮೂಲ ದಾಖಲಾತಿಗಳನ್ನು ಆಯಾ ಸಾಕ್ಷಿದಾರರು ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿರುತ್ತಾರೆ ). ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಬಂದು ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ಅಮಾನತ್ತು ಪಡಿಸಿಕೊಂಡಂತಹ ದಾಖಲಾತಿಗಳನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿದ್ದೇನೆ. ದಿನಾಂಕ 23–02–2002 ರಂದು ಸಾಕ್ಷಿದಾರರಾದ ಜಗದೀಶ ನಂದಾ ಗಾಂವಕರ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಅದೇ ದಿನ ನ್ಯಾಯಾಲಯಕ್ಕೆ ಆರೋಪಿತರನ್ನು ಹಾಜರು ಪಡಿಸಿ ಆರೋಪಿ ನಂ. 2 ರಿಂದ 5 ರವರನ್ನು ನ್ಯಾಯಾಂಗ ಬಂಧನಕ್ಕೆ ಮತ್ತು ಆರೋಪಿ ನಂ. 1 ನೇ ಯವರನ್ನು ಪೋಲಿಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಿಕೊಂಡಿದ್ದೇನೆ. ದಿನಾಂಕ 25–05–2002 ರಂದು 1 ನೇ ಆರೋಪಿಯನ್ನು ಕರೆದುಕೊಂಡು ವಿಜಯಪುರಕ್ಕೆ ಹೋಗಿ ಪಂಚರ ಸಮಕ್ಷಮ ಅವರ ಮನೆಯಲ್ಲಿ ಆರೋಪಿತನು ತೋರಿಸಿದಂತಹ ಕ್ರಮ ಸಂಖ್ಯೆ 1 ರಿಂದ 106 ರ ವಿವಿಧ ವ್ಯಕ್ತಿಗಳ ದಾಖಲಾತಿಗಳನ್ನು ಮಹಜರ ಮಾಡಿ ಅಮಾನತ್ತು ಪಡಿಸಿಕೊಂಡಿದ್ದೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು.

1 ನೇ ಆರೋಪಿಯ ತಂದೆ ಜೈನುದ್ದೀನ್ ಚೌಧರಿ ರವರು ವಾಸವಾಗಿದ್ದ ಮನೆಯ ಹಣಕಾಸಿನ ಮೂಲದ ಬಗ್ಗೆ ನೀಡುವಂತೆ ನೋಟಿಸನ್ನು ನೀಡಿದ್ದೇನೆ. ನಂತರ ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ಜಿಲಾನಿ ಚಟರಕಿ ಯವರನ್ನು ತಹಶೀಲ್ದಾರ ಕಚೇರಿಯ ಹತ್ತಿರ ವಶಕ್ಕೆ ಪಡೆದು ವಿಚಾರಣೆ ಮಾಡಿದ್ದೇನೆ. ನಂತರ ಆರೋಪಿ ನಂ. 1 ಮತ್ತು 6 ರವರನ್ನು ಕಾರವಾರಕ್ಕೆ ಕರೆದುಕೊಂಡು ಬಂದಿದ್ದೇನೆ. ವಶಕ್ಕೆ ಪಡಿಸಿಕೊಂಡತಹ ದಾಖಲಾತಿಗಳನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿದ್ದೇನೆ. (ಮೂಲ ದಾಖಲಾತಿಗಳನ್ನು ಆಯಾ ಸಾಕ್ಷಿದಾರರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ .) ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿ , ಪುನಃ 1 ನೇ ಆರೋಪಿಯನ್ನು ಪೋಲಿಸ್ ಕಸ್ಟಡಿಗೆ ತೆಗೆದುಕೊಂಡಿದ್ದೇನೆ. 1 ನೇ ಆರೋಪಿ ಅಕ್ರಮವಾಗಿ ಪಡೆದುಕೊಂಡಂತಹ ಹಣದಲ್ಲಿ ಕಾರ ಸಂಖ್ಯೆ ಕೆಎ 35 ಎಮ್ 6242 ನೇದನ್ನು ದಾವಣಗೆರೆ ಹತ್ತಿರ ಪೂಜಾ ಇಂಟರನ್ಯಾಷನಲ್ ಹತ್ತಿರ ಎ ಎಸ್ ಐ ರವರು ವಶ ಪಡೆಸಿಕೊಂಡು ಬಂದು ನನ್ನ ಮುಂದೆ ಹಾಜರು ಪಡಿಸಿದ್ದಾರೆ . ಅದನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿದ್ದೇನೆ.

ದಿನಾಂಕ 27-05-2002 ರಂದು ತಹಶೀಲ್ದಾರ , ಕಾರವಾರ ಇವರಿಗೆ ಸಿಂಧುತ್ವ ಪ್ರಮಾಣ ಪತ್ರ ಮತ್ತು ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳಲು ಅನುಸರಿಸಬೇಕಾದ ಕ್ರಮದ ಬಗ್ಗೆ ಪತ್ರವನ್ನು ಬರೆದಿದ್ದೇನೆ ಮತ್ತು ಅವರಿಂದ ಉತ್ತರವನ್ನು ಪಡೆದುಕೊಂಡಿದ್ದೇನೆ. ದಿನಾಂಕ 28-05-2002 ರಂದು 1 ನೇ ಆರೋಪಿಯನ್ನು ಪೋಲಿಸ್ ಕಸ್ಟಡಿಯಿಂದ ನ್ಯಾಯಾಂಗ ಬಂಧನಕ್ಕೆ ಕಳಿಸಿಕೊಡಲು ಮನವಿ ಮಾಡಿಕೊಂಡಿದ್ದೇನೆ. ಮುಂದಿನ ತನಿಖೆಯನ್ನು ಚಾಸಾ 123 ಇವರಿಗೆ ವಹಿಸಿಕೊಟ್ಟಿದ್ದೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ರಿಂದ 6 ಇವರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ನಂ. 1 ರಿಂದ 5 ರವರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಅವರ ಹಾಜರಾತಿ ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು, ಪುರಸ್ಕರಿಸಲಾಗಿದೆ .

**ಪಾಟೀ ಸವಾಲು – 1 ರಿಂದ 5, 9 ನೇ ಆರೋಪಿತರ ಪರ ವಕೀಲರಿಂದ**

ಚಾಸಾ 1 ಇವರನ್ನು ಕಾರವಾರ ಮಾರುಕಟ್ಟೆಯ ಹತ್ತಿರ ಹೋಗುತ್ತಿದ್ದಾಗ ನಾನು ಅವರನ್ನು ಠಾಣೆಗೆ ಕರೆಸಿ ಒತ್ತಾಯ ಪೂರ್ವಕವಾಗಿ 5 ರಿಂದ 6 ದಾಖಲಾತಿಗಳಿಗೆ ಅವರ ಸಹಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನಮ್ಮ ಠಾಣೆಗೆ ಬಂದು ಲಿಖಿತ ಪ್ರಥಮ ವರ್ತಮಾನ ಹೇಳಿಕೆಯನ್ನು ಸ್ವಯ ಆಗಿ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಮ್ಮ ಠಾಣೆಯವರು ಹೆಸರು ಮಾಡಿಕೊಳ್ಳಲು ಮತ್ತು ಉನ್ನತ ಹುದ್ದೆಗೆ ಹೋಗಬೇಕೆನ್ನುವ ಉದ್ದೇಶದಿಂದ ಚಾಸಾ 1 ಇವರನ್ನು ಕರೆದು ನಿಪಿ–1 ಕ್ಕೆ ಸಹಿ ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮಹಜರ ಮಾಡುವ ಕಾಲಕ್ಕೆ ಭಾವ ಚಿತ್ರ ತೆಗೆಯುತ್ತಾರೆ ಎಂದರೆ ಸರಿ . ಈ ಕೇಸಿನಲ್ಲಿ ಮಹಜರ ಮಾಡುವ ಕಾಲಕ್ಕೆ ಭಾವ ಚಿತ್ರ ತೆಗೆಗದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಭಾವ ಚಿತ್ರ ತೆಗೆಯುತ್ತಿರಲಿಲ್ಲ ಎಂದು ಹೇಳುತ್ತಾರೆ . ಆ ಸಮಯದಲ್ಲಿ ಕಾರವಾರದಲ್ಲಿ ಪೋಟೋ ಸ್ಟುಡಿಯೋಗಳು ಇದ್ದವು ಎಂದರೆ ಸರಿ . ಮಹಜರ ಮಾಡಿ ದಾಖಲಾತಿಗಳನ್ನು ವಶಪಡಿಸಿಕೊಳ್ಳುವ ಕಾಲಕ್ಕೆ ಭಾವ ಚಿತ್ರಗಳು ತೆಗೆಯಲು ತೊಂದರೆ ಇಲಿಲ್ಲ ಎಂದರೆ ಸರಿ . ನಾನು ಹೇಳಿದಂತಹ ಮಹಜರಗಳನ್ನು ಠಾಣೆಯಲ್ಲಿ ಕುರಿತು ಕೇಸಿಗೆ ಅನುಕೂಲವಾಗುವಂತೆ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನವತಾರಾ ಹೊಟೆಲ್ ಲಾಡ್ಜಗೆ ನಾನು ಹೋಗಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ನಂ. 1 ರಿಂದ 6 ಯಾವುದೇ ಸ್ವಖುಷಿ ಹೇಳಿಕೆಯನ್ನು ನೀಡಿಲ್ಲ ಅನ್ನುವುದು ಸರಿಯಲ್ಲ. 1 ನೇ ಆರೋಪಿ ಯಾವುದೇ ಮನೆ ಅಥವಾ ಸ್ಥಳವನ್ನು ತೋರಿಸಿಲ್ಲ ಮತ್ತು ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಅನ್ನುವುದು ಸರಿಯಲ್ಲ. ಕಾರನ್ನು 1 ನೇ ಆರೋಪಿ ತನ್ನ ಆದಾಯದಿಂದ ಖರೀದಿಸಿದ್ದ ಎಂದರೆ ಸರಿಯಲ್ಲ. ಯಾವುದೇ ಆಧಾರವಿಲ್ಲದೇ ಸದರಿ ಕಾರನ್ನು ಈ ಕೇಸಿನಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ದಾವಣಗೆರೆಗೆ ಕಾರನ್ನು ಅಮಾನತ್ತು ಪಡಿಸಿಕೊಂಡು ಬರಲು ನಮ್ಮ ಸಿಬ್ಬಂದಿಯವರನ್ನು ನೇಮಕ ಮಾಡಿಲ್ಲ ಅನ್ನುವುದು ಸರಿಯವುಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ತನಿಖೆ ಮಾಡಿಲ್ಲ

ಅನ್ನುವುದು ಸರಿಯಲ್ಲ. ಚಾಸಾ 123 ನನ್ನ ಮೇಲಾಧಿಕಾರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಠಾವಣೆಯಲ್ಲಿ ಕುರಿತು ದಾಖಲಾತಿಗಳನ್ನು ಸೃಷ್ಟ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರರಕಣಕ್ಕೂ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9 ನೇ ಆರೋಪಿ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕಾರವಾರ